ಬಿಡುವುದನ್ನು ಕೇಳಿದ್ದೇವೆ, ಆದರೆ ಊಟ ಬಿಡುವುದೆಂದರೆ...' ನೀಲಾಂಜನ ತನ್ನ ಕೌತುಕವನ್ನು ಬಚ್ಚಿಡಲು ಸಾಧ್ಯವಾಗದೆ ಕೇಳಿಬಿಟ್ಟಿದ್ದಳು.

'ಓಹ್, ಅದಾ! ಗಾಳಿಯನ್ನೆ ಊಟವನ್ನಾಗಿ ಕನ್ವರ್ಟ್ ಮಾಡುವ ವಿದ್ಯೆಯನ್ನು ಯಾರೊಂದಿಗೋ ಚಾಲೆಂಜ್ ಮಾಡಿದ್ದರಿಂದ ಕಲಿತುಬಿಟ್ಟಿದ್ದೆ. ಈ ಹಿಮಾಲಯದ ತಪ್ಪಲಲ್ಲಿ ಸುಮಾರು ಜನ ಸಾಧುಗಳು ಗಾಳಿಯನ್ನೆ ಊಟವನ್ನಾಗಿ ಪರಿವರ್ತಿಸಿಕೊಂಡು ಅನೇಕ ತಿಂಗಳುಗಳ ಕಾಲ ಇದ್ದಲ್ಲೆ ಇದ್ದು ಬಿಡುತ್ತಾರೆ. ಅದೊಂದು ಕಠಿಣ ವಿದ್ಯೆ. ಆದರೆ ನನಗ್ಯಾಕೋ ಕರುಳಿಗೆ ಯಾವೊತ್ತೂ ಆಹಾರವೇ ಶ್ರೇಷ್ಠ ಅನ್ನಿಸಿತು. ಜೀವ ಜಗತ್ತಿನಲ್ಲಿ ಕರುಳಿರುವ ಯಾವುದೇ ಪ್ರಭೇದಗಳಿಗೂ ಆಹಾರಕ್ಕೆ ಗಾಳಿ **substitute** ಆಗಲಾರದು. ಮನುಷ್ಯ ತನ್ನ ಸಂಶೋಧನೆಗಳಿಂದ ಇದುವರೆವಿಗೂ ಆವಿಷ್ಕರಿಸಿರುವ ಯಾವ ಘನವಾದ ಯಂತ್ರವೂ ಮನುಷ್ಯನ ಕರುಳಿಗೆ ಸಮನಾಗಲಾರದು. ಗಾಳಿಯಿಂದ ಆಹಾರವನ್ನು ತಯಾರಿಸುವ ವಿದ್ಯೆಯನ್ನು ಹಿಂದಕ್ಕೆ ಪಡೆಯುವ ಪ್ರಕ್ರಿಯೆಯಲ್ಲಿ ತೊಡಗಿದ್ದೇನೆ. ಯಾವುದೇ ಒಂದು ವಿದ್ಯೆಯನ್ನು ಕಲಿಯಲು ಎಷ್ಟು ಶ್ರಮ ಪಡಬೇಕಾಗುತ್ತದೋ ಅದನ್ನು ತ್ಯಜಿಸಲು ಎರಡರಷ್ಟು ಶ್ರಮಪಡಬೇಕಾಗುತ್ತದೆ. ಹಸಿವನ್ನು ಕಳೆದುಕೊಂಡ ನನ್ನ ದೇಹ ಅತ್ಯಂತ ಕೃಶವಾಗಿ ಬಿಟ್ಟಿತ್ತು. ಮತ್ತೆ ಹಸಿವನ್ನು ನನ್ನ ಕರುಳಿನಲ್ಲಿ ಪುನರ್ ಪ್ರತಿಷ್ಠಾಪಿಸುವ ಕೆಲಸದಲ್ಲಿ ಯಶಸ್ವಿಯಾಗುತ್ತಿದ್ದೇನೆ...' ಧಾತುಸೇನ ಮತ್ತು ಅವರ ಮಾತುಗಳು ವಿಚಿತ್ರ ಜಗತ್ತಿಗೆ ಕರೆದೊಯ್ಯುತ್ತಿವೆಯೆನಿಸಿದರೂ ವಾಸ್ತವದ ನಿಖರತೆ ಪ್ರತಿ ಮಾತಿನಲ್ಲೂ ತುಂಬಿ ತುಳುಕುತ್ತಿತ್ತು. 'ಹಸಿವೇ ಇಲ್ಲದಿದ್ದರೆ ಜಗತ್ತಿನಾದ್ಯಂತ ಆರ್ಥಿಕ ಚಟುವಟಿಕೆಗಳೇ ಸ್ಥಗಿತಗೊಳ್ಳುತ್ತಿದ್ದವೇನೋ...' ನಾನು ಹಸಿವನ್ನು ಆರ್ಥಿಕ ಚಟುವಟಿಕೆಗಳಿಗೆ ತಳಕು ಹಾಕುತ್ತಾ ಮಾತು ತೂರಿಸಿದ್ದೆ.

'ಆರ್ಥಿಕ ಚಟುವಟಿಕೆಗಳೇನು, ಹಸಿವೇ ಇಲ್ಲದಿದ್ದರೆ ಇಡೀ ಪ್ರಾಣಿ ಸಂಕುಲವೇ ನಿಷ್ಕ್ರಿಯವಾಗಿ ಬಿಡುತ್ತಿತ್ತು. ಸೋ, ಜಗತ್ತಿನ ಸಂಪೂರ್ಣ ಕ್ರಿಯೆಟಿವಿಟಿಯ ಮೂಲ ಕರುಳು. ಜಗತ್ತಿನ ಎಲ್ಲಾ ವ್ಯಾಪಾರ ವಹಿವಾಟುಗಳು, ಕೈಗಾರಿಕೆಗಳು, ಸಾರಿಗೆ ಸಂಪರ್ಕ, ತಂತ್ರಜ್ಞಾನ ಊರ್ಜಿತವಾಗಲು ಕರುಳೇ ಕಾರಣ, ಮತ್ತೊಂದು ಸತ್ಯವೆಂದರೆ ಜಗತ್ತಿನಲ್ಲಿ ಹಸಿವಿಗಿಂತಲೂ ಕ್ರೂರವಾದದ್ದು ಬೇರೇನೂ ಇರಲಾರದು. ಭೂಮಿಯ ಮೇಲೆ ಪ್ರಾಣಿಸಂಕುಲ ಸೃಷ್ಟಿಯಾದಾಗಿನಿಂದಲೂ **cannibalism** ಚಾಲ್ತಿಯಲ್ಲಿರುವುದು ಹಸಿವಿನ ಕ್ರೂರತೆಯಿಂದಲೆ. **cannibalism** ಅಂದರೆ ಯಾವುದೇ ಜಾತಿಯ ಪ್ರಾಣಿ ಸ್ವಜಾತಿ ಪ್ರಾಣಿಯ ದೇಹವನ್ನು ಭಕ್ಷಿಸುವುದು. ಲೈಂಗಿಕ ಕ್ರಿಯೆ ಕೂಡ ಒಂದು ರೀತಿಯ **cannibalism** ಎಂದೇ ಹೇಳಬಹುದು. ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವಾಗ ಗಂಡು ಮತ್ತು ಹೆಣ್ಣು ದೇಹಗಳು ಪರಸ್ಪರ ಒಂದನ್ನೊಂದು ಕಿತ್ತು ತಿನ್ನುವಂತೆ ಪ್ರವರ್ತಿಸುತ್ತಿರುತ್ತವೆ. ಆದ್ದರಿಂದ ಕಾಮವನ್ನು ಕೂಡ ಹಸಿವೆಂದೇ ಪರಿಗಣಿಸಬಹುದು. ಈ ಬನಾರಸ್‌ನ ಅನೇಕ ಮಂದಿ ಸಾಧುಗಳು ಹೆಣಗಳೊಂದಿಗೆ ಮಲಗಿ ಲೈಂಗಿಕ ತೃಷೆ ಈಡೇರಿಸಿಕೊಳ್ಳುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ...' ಧಾತುಸೇನ ಹೋಮಕುಂಡಕ್ಕೆ ಒಂದೆರಡು ಸೌದೆಯ ಸಣ್ಣ ತುಂಡುಗಳನ್ನು ಹಾಕುತ್ತಾ ಮಾತು ನಿಲ್ಲಿಸಿದರು. ಈಗ ಅವರ ಕಣ್ಣುಗಳಲ್ಲಿ ವಿಚಿತ್ರವಾದ ಕಾಂತಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು.

'ಓ ಮೈ ಗಾಡ್, ಮನುಷ್ಯ ಎಷ್ಟೊಂದು ಹೊಲಸು...' ನೀಲಾಂಜನ ಉದ್ಗರಿಸಿದ್ದಳು.

'**Fertility**ಯ ನಿಜವಾದ **base** ಹೊಲಸೇ. ದೇಹಗಳ ರಚನೆಯೇ ಹಾಗೆ. ಅವು ಹೊರಸೂಸುವ ಪ್ರತಿಯೊಂದು ವಿಸರ್ಜನೆ ಕೂಡ ಫಲವತ್ತತೆಯನ್ನು ಹೊಂದಿರುತ್ತದೆ. ಒಂದು